# ಶತಕಗೈದ ತಡಹಾಳ ಸಹಕಾರಿ ಸಂಘ

ಬಸವರಾಜ ಬಾರಕೇರ

ಸಮಾಜಶಾಸ್ತ್ರ ಉಪನ್ಯಾಸಕರು, ದಾನಮ್ಮದೇವಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಿಳಾ ಮಹಾವಿದ್ಯಾಲಯ, ಮುಧೋಳ.

DOI: https://doi.org/10.5281/zenodo.15124216

## ABSTRACT:

ಜನರ ಸೇವೆಯೇ ಜನಾರ್ಧನನ ಸೇವೆ ಎಂಬಂತೆ ಪ್ರಾಚೀನ ಕಾಲದಿಂದಲೂ ಭಾರತ ಸೇವೆಯಲ್ಲಿ ಎತ್ತಿದ ಕೈ. ಅಂತೆಯೇ ಕರ್ನಾಟಕದಲ್ಲಿಯೂ ಕೂಡಾ ಸಹಕಾರ ಸಂಘಗಳು ಸ್ವಾತಂತ್ರ್ಯಪೂರ್ವದಿಂದಲೂ ಸೇವೆಗೆ ಸಿದ್ಧವಾಗಿವೆ. ಅನೇಕ ಬಡ ಮತ್ತು ಮಧ್ಯಮ ವರ್ಗದ ಜನರು ಹಾಗೂ ಅಂಚೀಕರಣಗೊಂಡ ಸಮೂಹಗಳು ಇದರ ಲಾಭ ಪಡೆದುಕೊಳ್ಳುತ್ತಿವೆ. ಗದಗ ಜಿಲ್ಲೆಯ ಕಣಗಿನಹಾಳದಲ್ಲಿ ಇಡೀ ಭಾರತದಲ್ಲಿಯೇ ಪ್ರಥಮ ಕೃಷಿಪತ್ತಿನ ಸಹಕಾರಿ ಸಂಘ ಸ್ಥಾಪನೆಯಾಯಿತು. ರೈತರ ಏಳಿಗೆ ಬಯಸಲು ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ತಡಹಾಳ ಗ್ರಾಮದಲ್ಲಿ 1922ರಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತ ಸ್ಥಾಪನೆಯಾಯಿತು. ಇಂದು ಅನೇಕ ರೀತಿಯ ಆರ್ಥಿಕ ಸಾಮಾಜಿಕ ಸರಕಾರಿ ಯೋಜನೆಗಳ ಸಹಾಯವನ್ನು ಗ್ರಾಮೀಣ ಜನರಿಗೆ ನೀಡುವಲ್ಲಿ ಯಶಸ್ವಿಯಾದ ಕೃಷಿಪತ್ತಿನ ಸಹಕಾರಿ ಸಂಘದ ಕುರಿತಾದ ಮಾಹಿತಿ ಪ್ರಸ್ತುತ ಲೇಖನದಲ್ಲಿದೆ.

## KEYWORDS:

ಮುಯ್ಯ, ಆಯಾ ಪದ್ದತಿ, ಒಕ್ಕಲುತನ, ಕೆಚ್ಚೆದೆ, ತಡಹಾಳ, ಶತಮಾನ.

ಜನರ ಸೇವೆಯೇ ಜನಾರ್ಧನನ ಸೇವೆ ಎಂಬಂತೆ ಮಾನವ ಸಮಾಜದಲ್ಲಿ ಸಹಕಾರವು ಮೂಲ ಮಂತ್ರವಾಗಿದ್ದು, ಸಹಕಾರವು ಕಲ್ಪವೃಕ್ಷವಿದ್ದಂತೆ. ಆರ್ಥಿಕವಾಗಿ ಸಹಕಾರ ಎಂದರೆ–ಸಮಸ್ಯೆಯ ಸುಳಿಯಲ್ಲಿದ್ದ ಜನರು ಸ್ವಯಂಪ್ರೇರಣೆಯಿಂದ ಕೂಡಿ ತಮ್ಮ ಆರ್ಥಿಕ ಚಟುವಟಿಕೆಗಳನ್ನು ಪೂರೈಸಲು ಸೇರಿದ ಒಂದು ಜಾಗೃತ ಸಮೂಹವಾಗಿದೆ. ಸಾಮಾಜಿಕವಾಗಿ ಸಹಕಾರವು ಮಾನವ ಸಮಾಜದಷ್ಟೇ ಪ್ರಾಚೀನವಾದದ್ದು. ಗ್ರಾಮೀಣ ಪ್ರದೇಶದಲ್ಲಿದ್ದ ಮುಯ್ಯ(ಕೂಡಿ) ಮತ್ತು ಆಯಾ ಕೊಡುವ ಪದ್ಧತಿಗಳು ಕೂಡಾ ಸಹಕಾರದ ನಿದರ್ಶನಗಳಾಗಿವೆ.

ರಾಜಕೀಯ ದೃಷ್ಟಿಯಿಂದ ಭಾರತದಲ್ಲಿ ಪ್ಲಾಸಿ ಕದನದ ನಂತರ ಸಾಕಷ್ಟು ಬದಲಾವಣೆಗಳಾದವು. ಬ್ರಿಟೀಷರು ತಮ್ಮ ರಾಜ್ಯ ಸ್ಥಾಪನೆಯ ಬೀಜ ಬಿತ್ತಿದರು. ಜೊತೆಗೆ ಯುರೋಪಿನಲ್ಲಿ ಔದ್ಯೋಗಿಕ ಕ್ರಾಂತಿಯಾಯಿತು. ಇದರ ಪರಿಣಾಮ ಭಾರತದ ಆರ್ಥಿಕ ಪರಿಸ್ಥಿತಿಯ ಮೇಲೆ ಪ್ರಭಾವ ಬೀರಿತು. ಅನಿವಾರ್ಯವಾಗಿ

ಭಾರತೀಯರು ಒಕ್ಕಲುತನವನ್ನೇ ಅವಲಂಬಿಸಬೇಕಾಯಿತು. ಹೀಗಾಗಿ ಒಕ್ಕಲುತನದ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿತು. ಆ ಸ್ಥಿತಿಯಲ್ಲಿ ರೈತರು ಸ್ಥಳೀಯ ಸಾಹುಕಾರರಲ್ಲಿ ಸಾಲದ ಹೊರೆ ಹೊತ್ತು ಶೋಷಣೆ ತಡೆಯಲಾರದೆ ಜನರು ಪ್ರಕ್ಷುಬ್ಧಗೊಂಡು ಸರಕಾರದ ರೀತಿ–ನೀತಿಗಳನ್ನು ಪ್ರತಿಭಟಿಸಲು ಪ್ರಾರಂಭಿಸಿದರು. ಆಗ ಸರಕಾರ ರೈತರ ಸಮಾಧಾನಕ್ಕಾಗಿ ಮತ್ತು ಪರಿಹಾರಕ್ಕಾಗಿ ಕ್ರಿ. ಶ. 1879 ರಲ್ಲಿ ಡೆಕ್ಕನ್ ಒಕ್ಕಲಿಗರ ಪರಿಹಾರಕ್ಕಾಗಿ ನಂತರ 1882ರಲ್ಲಿ ಒಕ್ಕಲುತನದ ಬ್ಯಾಂಕು, 1883ರಲ್ಲಿ ಭೂಸುಧಾರಣ ಸಾಲಗಳ ಕಾಯ್ದೆ 1884ರಲ್ಲಿ ಒಕ್ಕಲಿಗರ ಸಾಲಗಳ ಕಾಯ್ದೆ ಪಾಸಾದವು. ಆದರೂ ಜನತೆಯ ಪರಿಸ್ಥಿತಿ ಸುಧಾರಿಸಲಿಲ್ಲ.

1901 ರಲ್ಲಿ ಸರ್ ಎಡ್ವರ್ಡ್ ಲಾ ಅವರ ನೇತೃತ್ವದಲ್ಲಿ ಜರ್ಮನಿಯಲ್ಲಿ ಗ್ರಾಮಂತರ ಪತ್ತಿನ ಸಂಘಗಳನ್ನು ಸ್ಥಾಪಿಸಲು ಅಧ್ಯಯನ ಕೈಗೊಂಡು ಸಹಕಾರಿ ಸಂಘಗಳನ್ನು ಸ್ಥಾಪಿಸಲು ಸಿಫಾರಸು ಮಾಡಲಾಯಿತು. ಅದಕ್ಕೆ ಅನುಗುಣವಾಗಿ ಭಾರತದಲ್ಲಿ 1904ರಂದು "ಸಹಕಾರಿ ಸಂಘಗಳ ಪ್ರಪ್ರಥಮ ಕಾನೂನು" ಬಂದಿತು. ನಂತರ 1905ರಲ್ಲಿ ಮುದ್ದೇಬಿಹಾಳ, ಶಿರಸಿ, ಬೆಳಗಾವಿ, ಧಾರವಾಡ ಹೀಗೆ 1904–1905 ರಲ್ಲಿ ಮುಂಬೈ ಪ್ರಾಂತ್ಯದಲ್ಲಿ ಒಟ್ಟು 12 ಸಹಕಾರಿ ಸಂಘಗಳಲ್ಲಿ ಎಲ್ಲವೂ ಉತ್ತರ ಕರ್ನಾಟಕದಲ್ಲಿ ಸ್ಥಾಪಿತವಾದವು. 1912ರ ಸಹಕಾರಿ ಕಾನೂನಿಗೆ ಒಳಪಟ್ಟ ಗ್ಯಾರಂಟಿ ಯುನಿಯನ್ ಅಸ್ತಿತ್ವಕ್ಕೆ ಬಂದಿತು. ಆಗಿನ ಧಾರವಾಡ ಜಿಲ್ಲೆಯಲ್ಲಿ ಹುಲಕೋಟಿ, ಅಮ್ಮಿನಬಾವಿ, ಮುಳಗುಂದ, ಬೆಳಗಾವಿ, ಸವದತ್ತಿ, ಮುಂಡಗೋಡ, ಶಿರಸಿಯಲ್ಲಿ ಸ್ಥಾಪಿತವಾಗಿ ಸೇವೆ ಸಲ್ಲಿಸಿದರೂ ಕೂಡಾ ಜನರಿಗೆ ಆರ್ಥಿಕ ಸೌಲಭ್ಯ ಸಿಗುತ್ತಿರಲಿಲ್ಲ.

1914ರಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಮಧ್ಯವರ್ತಿ ಸಹಕಾರಿ ಬ್ಯಾಂಕ್ ಇರಬೇಕೆಂದು "ಸಹಕಾರಿ ಸಂಘಗಳ ಕಾನೂನು" ಪಾಸಾಯಿತು. 1916ರಲ್ಲಿ ದಿ ಕರ್ನಾಟಕ ಸೆಂಟ್ರಲ್ ಕೋ ಆಪ್‌ರೇಟಿವ್ ಬ್ಯಾಂಕ್ ಲಿಮಿಟೆಡ್ ಧಾರವಾಡದಲ್ಲಿ ಸ್ಥಾಪಿತವಾಯಿತು. 1918 ಬೆಳಗಾವಿ, 1919 ವಿಜಯಪುರ, 1920 ಶಿರಸಿಯಲ್ಲಿ ಮಧ್ಯವರ್ತಿ ಬ್ಯಾಂಕ್‌ಗಳು ಹುಟ್ಟಿಕೊಂಡವು. ಹೀಗೆ ಮಾನವನು ಆಹಾರ ಸಂಗ್ರಹದ ಪ್ರಾಚೀನ ಸಮಾಜದಿಂದ ಇಂದಿನ ಆಧುನಿಕ ಸಮಾಜದವರೆಗೂ ಭಾರತದಲ್ಲಿ ಹಳ್ಳಿಗಳದ್ದೆ ಪಾರುಪತ್ಯ. ಕೃಷಿ ಪ್ರಧಾನ ರಾಷ್ಟ್ರವಾದ ಭಾರತದಲ್ಲಿ ಕರ್ನಾಟಕ ಒಂದು ಸುಂದರ ರಮಣೀಯ ರಾಜ್ಯವಾಗಿದ್ದು ವಿದ್ಯಾಕಾಶಿಯೆಂದೆ ಪ್ರಸಿದ್ಧವಾದ ಧಾರವಾಡ ಜಿಲ್ಲೆ ಶಿಕ್ಷಣ, ಸಂಗೀತ ಕಲೆ, ಸಾಹಿತ್ಯ, ಕೃಷಿಗೆ ಹೆಸರುವಾಸಿಯಾಗಿದೆ. ಅಂತೆಯೆ ಭಾರತ ಸ್ವಾತಂತ್ರ್ಯಕ್ಕೋಸ್ಕರ ಕೆಚ್ಚದೆಯ ಬಂಡಾಯದ ನಾಡು ನವಲಗುಂದ–ನರಗುಂದದ ಕೊಡುಗೆ ಅಪಾರವಾದದ್ದು. ಅಜಾತ ನಾಗಲಿಂಗೇಶ್ವರನ ನೆಲೆಬೀಡಾದ ನವಲಗುಂದ ತಾಲೂಕಿನ ಅಂಚಿನ ಹಳ್ಳಿಯೆ ತಡಹಾಳ ಗ್ರಾಮ, ಸುಂದರ ಧಾಮ, ಕೃಷಿಭೂಮಿಯ ಸೊಬಗಿನ ತಾಣ.

**ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ**
**ಎಳ್ಳು ಜೀರಿಗೆಯ ಬೆಳಿಯೋಳ। ಭೂಮಿತಾಯಿನ**
**ಎದ್ದೊಂದು ಘಳಿಗೆಯ ನೆನೆದೇನ॥**

ಎನ್ನುವ ಜನಪದರ ಭಕ್ತಿ ನುಡಿಗಳಂತೆ ಭೂತಾಯಿನ ನೆನೆದು ಕೃಷಿ ಕಾರ್ಯ ಕೈಗೊಳ್ಳುವ, ಬೆಣ್ಣೆಹಳ್ಳ-ಸಣ್ಣಹಳ್ಳಗಳ ಪವಿತ್ರಗಂಗೆಯನ್ನೊಳಗೊಂಡ ಸುಂದರ ಕೆರೆಯನ್ನು ಹೊಂದಿದ, ಬಸವೇಶ್ವರನನ್ನು ಆರಾಧ್ಯ ದೈವವಾಗಿಸಿಕೊಂಡ ತಾಣವೇ ತಡಹಾಳ.

ಧಾರವಾಡ ಜಿಲ್ಲೆಯ ನವಲಗುಂದ-ನರಗುಂದ ಎಂದರೆ ನೆನಪಾಗುವುದು ಗಂಡುಮೆಟ್ಟಿದ ನಾಡು, ಬಾಬಾ ಸಾಹೇಬರ ಬೀಡು ಸಹಕಾರ ಚಳುವಳಿಯ ತವರೂರು. “ಸಹಕಾರಂ ಗೆಲ್ಗೆ ಸಹಕಾರಂ ಬಾಳ್ಗೆ” ಎಂಬಂತೆ ಸಹಕಾರ ಸಂಸ್ಕೃತಿಯ ತೊಟ್ಟಿಲು ತೂಗಿದ್ದು ಅಖಂಡ ಧಾರವಾಡ ಜಿಲ್ಲೆಯಲ್ಲಿ ಎಂಬುದು ಹೆಮ್ಮೆಯ ವಿಷಯ. ಸಹಕಾರ ತತ್ವಾಧಾರಿತ “ಇಂಡಿಯನ್-ಕೋ-ಆಪ್‌ರೇಟಿವ್ ಸೊಸೈಟಿ” 1904ರಲ್ಲಿ ರಚನೆಗೊಂಡ ಅನ್ವಯ ಮಾರನೆ ವರ್ಷವೇ 1905ರಲ್ಲಿ ಆಗಿನ “ಧಾರವಾಡ ಜಿಲ್ಲೆಯ ಗದಗ ತಾಲೂಕಿನ ಕಣಗಿನಹಾಳದಲ್ಲಿ ಇಡೀ ಭಾರತದಲ್ಲಿಯೇ ಪ್ರಪ್ರಥಮ ಕೃಷಿ ಪತ್ತಿನ ಸಹಕಾರಿ ಸಂಘ” ಸ್ಥಾಪನೆಯಾಯಿತು. ತದನಂತರ ನವಲಗುಂದ ತಾಲೂಕಿನ ತಡಹಾಳ-ಅರಹಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತ 25-01-1922ರಲ್ಲಿ ಸ್ಥಾಪನೆಯಾಯಿತು.

ಈ ಸಂಘವು 100 ವರ್ಷಗಳಲ್ಲಿ ಅನೇಕ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಕಾರ್ಯನಿರ್ವಹಿಸಿದ್ದಾರೆ. ಜೊತೆಗೆ ಕೃಷಿಕರನ್ನು, ಆಸಕ್ತಿ ಯುವ ಸಮುದಾಯವನ್ನು ಬೆಳಸಿ ಸಹಕಾರ ನೀಡಿ ಕೇವಲ 2000 ರೂಪಾಯಿಯಿಂದ ಪ್ರಾರಂಭವಾದ ಈ ಸಂಘವು ಇಂದು ಮೂರು ಕೋಟಿ ರೂಪಾಯಿ ವಹಿವಾಟು ಹೊಂದಿದ್ದು 1200 ಸದಸ್ಯರನ್ನು ಹೊಂದಿದೆ. ಆಧುನಿಕರಣದ ಪರಿಣಾಮವಾಗಿ ಹೊಸ ಹೊಸ ತಂತ್ರಜ್ಞಾನವನ್ನು ಒಳಗೊಂಡ ಡಿಜಿಟಲೀಕರಣ ವ್ಯವಸ್ಥೆ ಕೂಡ ಹೊಂದಿದೆ. ಹೀಗೆ ಅನೇಕ ಸಾಧನೆ ಸಂಕೋಲೆಗಳನ್ನು ದಾಟಿ ಮೆಟ್ಟಿನಿಂತು ಸಾಕಷ್ಟು ಏಳು-ಬೀಳುಗಳನ್ನು ಕಂಡು ಹಲವಾರು ಹೆಸರಿನಲ್ಲಿ ಬದಲಾವಣೆಯಾಗಿ ಮಾನ್ಯ ಶ್ರೀ ಮುತ್ತಪ್ಪ ತಿಪ್ಪಣ್ಣ ಬಳಗಲಿ ಇವರ ನೇತೃತ್ವದಲ್ಲಿ ಏಳ್ಗೆ ಕಂಡು ಇಂದು “ತಡಹಾಳ-ಅರಹಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ನಿ., ತಡಹಾಳ” ಎಂದು ಸ್ಥಾಪನೆಯಾಯಿತು.

ಕರ್ನಾಟಕ ಸರಕಾರದ ಆದೇಶದೊಂದಿಗೆ ಅಂದಿನಿಂದ ಇಂದಿನವರೆಗೂ ರೈತರ ಪ್ರಗತಿಯನ್ನು ಸಾಧಿಸುತ್ತಾ....

- ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಬೆಳೆಸಾಲ ವಿತರಣೆ
- ಸ್ವ ಸಹಾಯ ಗುಂಪುಗಳ ರಚನೆ

- ಪಡಿತರ ವಿತರಣೆ
- ರಸಗೊಬ್ಬರ ಮತ್ತು ಕೀಟನಾಶಕಗಳ ವಿತರಣೆ
- ಯಶಸ್ವಿನಿ ಯೋಜನೆ

ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ನೀಡುವುದರ ಮೂಲಕ ಅನೇಕ ಕಾರ್ಯಚಟುವಟಿಕೆಗಳನ್ನು ಮಾಡಿ ರೈತರ ಶ್ರೇಯೋಭಿವೃದ್ಧಿ ಬಯಸಿ ಇಂದು ಹೆಮ್ಮರವಾಗಿ ಬೆಳೆದು ತನ್ನ ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿದ್ದು ನಮ್ಮ ಧಾರವಾಡ ಜಿಲ್ಲೆ ನವಲಗುಂದ ತಾಲೂಕಿನ ತಡಹಾಳ ಗ್ರಾಮ ಪಂಚಾಯತಿಗೆ ಒಳಪಟ್ಟ, ತಡಹಾಳ, ಅರಹಟ್ಟಿ, ಕೊಂಗವಾಡ ಗ್ರಾಮಸ್ಥರಿಗೆ ಇಂದು ಶತಕದ ಸಂಭ್ರಮದ ಕ್ಷಣವಾಗಿದೆ.

ಈ ಸಂಭ್ರಮದ ಖುಷಿ, ಅಭಿವೃದ್ಧಿ ಶ್ರೇಯಸ್ಸು ಮುಂದುವರಿಯಲಿ ಪ್ರಗತಿ ಸಾಧಿಸಲಿ, ಬಡವರ ಮಧ್ಯಮ ವರ್ಗದವರ, ಕೃಷಿಕರ ಆಶಾಕಿರಣವಾಗಿ ಸರಕಾರದ ಎಲ್ಲ ಮಾಹಿತಿ, ಯೋಜನೆ, ಕಾರ್ಯಕ್ರಮಗಳನ್ನು ತಿಳಿಸುತ್ತಾ ದ್ವಿ-ಶತಕದತ್ತ ಈ ಕಾರ್ಯ ಮುನ್ನುಗ್ಗಲಿ ಎಂದು ಶುಭವನ್ನು ಹಾರೈಸುವ.

**ಪರಾಮರ್ಶನ ಗ್ರಂಥಗಳು:**

1. ಶಂಕರರಾವ್ ಚ.ನ., (2015), ಸಮಾಜಶಾಸ್ತ್ರ ಪರಿಚಯ, ಜೈ ಭಾರತ ಪ್ರಕಾಶನ, ಮಂಗಳೂರು.
2. ಶಂಕರರಾವ್ ಚ.ನ., (2013), ಸಮಾಜಶಾಸ್ತ್ರ ಮೂಲತತ್ವಗಳು: ಸಂಪುಟ-1, ಜೈ ಭಾರತ ಪ್ರಕಾಶನ, ಮಂಗಳೂರು.
3. ಶಂಕರರಾವ್ ಚ.ನ., (2023), ಅಂಚೀಕರಣಗೊಂಡ ಸಮೂಹಗಳ ಸಮಾಜಶಾಸ್ತ್ರ, ಜೈ ಭಾರತ ಪ್ರಕಾಶನ, ಮಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.